ಸಾಕ್ಷಿಯನ್ನು ದಿನಾಂಕಃ 21/10/2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ**

ಸಾಕ್ಷಿಗೆ ನಿಪಿಃ 1 ನ್ನು ತೋರಿಸಲಾಗಿ, ಸಾಕ್ಷಿ ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿಃ 1(ಬಿ) ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ**

**ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ವಕೀಲರಿಂದಃ**

ಸುಭಾಷರವರ ಪರಿಚಯ ಇದೆಯಾ ಎಂದರೆ ಸಾಕ್ಷಿ ಸುಭಾಷ ರವರ ತಂದೆ ನನಗೆ ತುಂಬಾ ಪರಿಚಯ ಎಂದು ಹೇಳುತ್ತಾರೆ. ಸುಭಾಷ ರವರು ಏನು ಕಾಗದ ಪತ್ರ ಇತ್ತು ಎಂದು ಕೇಳಲಾಗಿ ಸಾಕ್ಷಿ ಅವರ ಬಳಿ ಕಾಗದ ಪತ್ರ ಇದ್ದು, ನನಗೆ ಮೃತ್ಯು ಪತ್ರಕ್ಕೆ ಸಹಿ ಹಾಕಿ ಎಂದು ಹೇಳಿದ್ದರಿಂದ ಸಹಿ ಹಾಕಿದ್ದೇನೆಂದು ಹೇಳುತ್ತಾರೆ. ಮೃತ್ಯು ಪತ್ರವನ್ನು ನಾನು ಓದಿಲ್ಲ, ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆಂದು ಹೇಳುತ್ತಾರೆ . ಆಸ್ತಿಯ ಮಾಲೀಕರು ನಾಗೇಂದ್ರಸಾ ಪವಾರ ರವರು ಇದ್ದರು. ಮಾಲೀಕರು ಇದ್ದ ಬಗ್ಗೆ ಉತಾರ ನೋಡಿದ್ದೇನೆ. ಉತಾರ ನೋಡಿದ್ದೇನೆ , ಈಗ ನನಗೆ ನೆನಪಿಲ್ಲ. ಸದರಿ ಉತಾರದಲ್ಲಿ ಯಾರ ಯಾರ ಹೆಸರು ಇದ್ದವು ಎಂದು ನನಗೆ ನೆನಪಿಲ್ಲ. ಬರೆದುಕೊಡವ ಪ್ರಸಂಗ ಏಕೆ ಬಂತು ಎಂದು ನನಗೆ ಗೊತ್ತಿಲ್ಲ. ಸುಭಾಷ ರವರಿಗೆ ಒಬ್ಬ ಸಹೋದರಿ ಇದ್ದಾಳೆ ಎಂದು ನನಗೆ ಗೊತ್ತಿಲ್ಲ. ಮೃತ್ಯು ಪತ್ರ ಬರೆದವರ ಹೆಸರು ನನಗೆ ಗೊತ್ತಿಲ್ಲ. ನಿಮ್ಮ ಜೊತೆ ಮತ್ತೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಮೃತ್ಯು ಪತ್ರದಲ್ಲಿ ಕಬ್ಜಾವತ್ತಿ ಇದ್ದೇನೆ ಎಂದು ನಾಗೇಂದ್ರಸಾ ರವರು ನನಗೆ ಹೇಳಿಲ್ಲ. ಆ ದಿನ ಸುಭಾಷ ರವರು ಹಾಜರಿದ್ದರು. ಆ ದಿನ ಸುಭಾಷ ರವರು ಸಹ ಸಹಿ ಮಾಡಿರುತ್ತಾರೆ. ಸುಭಾಷ ಮತ್ತು ನೀವು ತುಂಬಾ ಆತ್ಮೀಯರು ಎಂದರೆ ಸಾಕ್ಷಿ ಪರಿಚಯಸ್ಥರು ಎಂದು ಹೇಳುತ್ತಾರೆ. ಆದ್ದರಿಂದ ಸುಭಾಷ ರವರ ಜೊತೆ ನನಗೆ ಗೆಳತನದ ಸಂಬಂಧ ಇದೆ. ಮನೆಯಲ್ಲಿ ವಿಶೇಷ ಕಾರ್ಯಕ್ರಮ ಇದ್ದರೆ ಬಂದು ಹೋಗುತ್ತೇವೆ ಎಂದರೆ ಸರಿ. ಆ ಗೆಳತನದ ಬೀಗಕ್ಕೆ ಬಿದ್ದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾಗೇಂದ್ರಸಾ ರವರು ಮೃತ್ಯು ಪತ್ರ ಬರೆದುಕೊಟ್ಟಿಲ್ಲ ಮತ್ತು ಅವರು ಮೃತ್ಯು ಪತ್ರಕ್ಕೆ ಯಾವುದೇ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ನಾಗೇಂದ್ರಸಾ ರವರು ಸದರಿ ಆಸ್ತಿಗೆ ಮಾಲೀಕರು ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಆಸ್ತಿಯ ಮಾಲೀಕರು ಇದ್ದಾರೆ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**2 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
21.10.2024
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**